**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ದಾಂಡೇಲಿ**

**ಸಿ.ಸಿ. ನಂ. 03/2022**

**ಫಿರ್ಯಾದಿದಾರರುಃ** ಕರ್ನಾಟಕ ಸರ್ಕಾರದ ಪರವಾಗಿ
ದಾಂಡೇಲಿ ನಗರ ಪೋಲೀಸ್ ಠಾಣೆ

**- ವಿರುದ್ಧ -**

**ಆರೋಪಿಃ** ಯಾಸೀನ ತಂದೆ ಅಬ್ದುಲ್ ಸಾಬ ಹುಂಡೇಕರ,
ಪ್ರಾಯಃ 42 ವರ್ಷ, ಉದ್ಯೋಗಃ ಕೂಲಿ ಕೆಲಸ,
ಸಾಃ ಬಸವೇಶ್ವರ ನಗರ, ದಾಂಡೇಲಿ.

**ದೋಷಾರೋಪಣೆ**

**ಶ್ರೀಮತಿ. ತೇಜಸ್ವಿನಿ ಸೊಗಲದ** ಪ್ರ.ದ.ನ್ಯಾ..ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಇಂತಿದೆಃ

ದಾಂಡೇಲಿಯ ಬಸವೇಶ್ವರ ನಗರದಲ್ಲಿ ಪಿರ್ಯಾದಿಯು ವಾಸವಾಗಿದ್ದು, ಆರೋಪಿಯಾದ ನೀವು ಪ್ರತಿ ದಿನ ಸರಾಯಿ ಕುಡಿಯಲು ಬಂದು, ಪಿರ್ಯಾದಿಗೆ ಮದುವೆ ಆದಾಗಿನಿಂದ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿದ್ದು, ಈ ಮೂಲಕ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ಐ.ಪಿ.ಸಿ. ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಎಸಗಿರುತ್ತಿರೆಂದು,

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ದಿನಾಂಕ 16.10.2021 ರಂದು ಸಾಯಂಕಾಲ 06.15 ಗಂಟೆಯ ಸುಮಾರಿಗೆ ಪಿರ್ಯಾದಿಯನ್ನು ಉದ್ದೇಶಿಸಿ ರಂಡಿ, ಸೂಳೆ ಅಂತಾ ಅವಾಚ್ಯವಾಗಿ ಬೈಯ್ದು, ಸಾರ್ವಜನಿಕ ಶಾಂತತೆ ಭಂಗಪಡಿಸಿ, ಈ ಮೂಲಕ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಐ.ಪಿ.ಸಿ. ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಎಸಗಿರುತ್ತಿರೆಂದು,

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತಯಾದ ನೀವು ಫಿರ್ಯಾದಿಗೆ ಕೈಯಿಂದ ಕುತ್ತಿಗೆಗೆ, ಮೈಗೆ ಹೊಡೆದು ಸಾದಾ

ಸ್ವರೂಪದ ಗಾಯ ಪಡಿಸಿ, ಈ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಐ.ಪಿ.ಸಿ. ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಎಸಗಿರುತ್ತಿರೆಂದು,

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತಯಾದ ನೀವು ಫಿರ್ಯಾದಿಯನ್ನು ಉದ್ದೇಶಿಸಿ ನಿನ್ನ ಸಾವು ನನ್ನ ಕೈಯಾಗ ಇದೆ, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಭಯವನ್ನುಂಟು ಮಾಡುವ ಉದ್ದೇಶದಿಂದ ಜೀವ ಬೆದರಿಕೆ ಹಾಕಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 506 ಐ.ಪಿ.ಸಿ. ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತಿರೆಂದು,

ಮೇಲ್ಕಂಡ ಅಪರಾಧಗಳ ಬಗ್ಗೆ ವಿಚಾರಣೆಯು ಇದೇ ನ್ಯಾಯಾಲಯದ ವ್ಯಾಪ್ತಿಗೆ ಹಾಗೂ ನನ್ನ ಸಂಜ್ಞೆಗೆ ಒಳಪಡುವುದರಿಂದ ಸದರಿ ಅಪರಾಧಗಳ ಬಗ್ಗೆ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಸಲು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

## ಆರೋಪಿಯ ಹೇಳಿಕೆ

**ಪ್ರಶ್ನೆಃ 1:** ಈಗ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೇ?

**ಉತ್ತರಃ**

**ಪ್ರಶ್ನೆಃ 2:**ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

**ಉತ್ತರಃ**

(ಈ ಆರೋಪಣೆಯನ್ನು ದಿನಾಂಕಃ 11.03.2026 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**ಸಹಿ ಇದೆ/-**

**(ಶ್ರೀಮತಿ ತೇಜಸ್ವಿನಿ ಸೊಗಲದ)**
**ಪ್ರ.ದ.ನ್ಯಾ..ದಂಡಾಧಿಕಾರಿಗಳು,**
**ದಾಂಡೇಲಿ.**